# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1251 |
| ಸದಸ್ಯರ ಹೆಸರು | : | ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 20.12.2018. |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ರಾಜೀನಾಮೆಯಿಂದ ತೆರವಾಗಿರುವ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿ ನೀಡುವಾಗ ಯಾವ ಕರಾರುಗಳನ್ನು ವಿಧಿಸಲಾಗಿದೆ; (ಮಾಹಿತಿ ನೀಡುವುದು) | ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.<br>ಪ್ರೌಢಶಾಲೆ:-<br>1. ನಿರ್ಧಿಷ್ಟ ಖಾಲಿ ಹುದ್ದೆಯು ಮೂಲತಃ ಅನುದಾನಿತ ಹುದ್ದೆಯಾಗಿರಬೇಕು.<br>2. ಅರ್ಹತೆ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿ ಮಾನದಂಡಗಳನ್ನು ಪಾಲಿಸಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸತಕ್ಕದ್ದು.<br>3. ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಕಳೆದ 5 ಶೈಕ್ಷಣಿಕ ವರ್ಷಗಳ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು.<br>4. ಮಕ್ಕಳ ದಾಖಲಾತಿ/ಹಾಜರಾತಿ ನಿಗಧಿತ ಮಟ್ಟದಲ್ಲಿರಬೇಕು.<br>5. ಮೂಲಭೂತ ಸೌಕರ್ಯಗಳನ್ನು ಹೊಂದಿರುವುದು.<br>ಪದವಿ ಪೂರ್ವ:-<br>1. ನಿರ್ಧಿಷ್ಟ ಖಾಲಿ ಹುದ್ದೆಯು ಮೂಲತಃ ಅನುದಾನಿತ ಹುದ್ದೆಯಾಗಿರಬೇಕು.<br>2. ಅರ್ಹತೆ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿ ಮಾನದಂಡಗಳನ್ನು ಪಾಲಿಸಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಬೇಕು.<br>3. 20 ಗಂಟೆಗಳ ಕಾರ್ಯಭಾರವನ್ನು ಹೊಂದಿರಬೇಕು. |
| ಆ) | ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳನ್ನು ತುಂಬಿಕೊಳ್ಳುವಲ್ಲಿ ವಿಧಿಸಿರುವ ಕರಾರುಗಳು ಅವೈಜ್ಞಾನಿಕವಾಗಿರುವುದು ನಿಜವೇ; | ಖಾಸಗಿ ಪ್ರೌಢಶಾಲೆಗಳಿಗೆ ಸರಕಾರದಿಂದ ಅನುದಾನ ಒದಗಿಸುವ ಪ್ರಮುಖ ಉದ್ದೇಶವೇ ಶೈಕ್ಷಣಿಕ ಗುಣಮಟ್ಟ ಕಾಪಾಡುವುದಾಗಿದೆ. ಅಲ್ಲದೆ, ಸಾರ್ವಜನಿಕ ಹಣದ ಸದ್ಬಳಕೆಯನ್ನು ಸಹ ಸಾಧಿಸಬೇಕಾಗಿರುವುದರಿಂದ ಸದರಿ ಷರತ್ತುಗಳು ವೈಜ್ಞಾನಿಕವಾಗಿರುತ್ತವೆ. |
| ಇ) | ತೆರವಾದ ಹುದ್ದೆಗಳನ್ನು ತುಂಬಿಕೊಳ್ಳಲು ವಿಧಿಸಿರುವ ಹಲವಾರು ಸದರಿ ಕರಾರುಗಳಿಂದ ಶಿಕ್ಷಣ ಗುಣಮಟ್ಟ ಕುಸಿಯುತ್ತಿರುವುದರಿಂದ ಸದ್ಯದ ಕರಾರುಗಳನ್ನು ಸಡಿಲಗೊಳಿಸಲು ಸರ್ಕಾರ ಚಿಂತೆ ನಡೆಸಿದೆಯೇ? | ಉದ್ಭವಿಸುವುದಿಲ್ಲ. |

(ಹೆಚ್. ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ

ಸಂಖ್ಯೆ: ಇಡಿ 707 ಎಸ್ಇಎಸ್ 2018)